# ದಿನಾಂಕ: 27–10–2010ರಂದು ಅಪರಾಹ್ನ: 03–00 ಗಂಟೆಗೆ ಹೇಮಾವತಿ ಸಭಾಂಗಣ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಹಣಕಾಸು,ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಶ್ರೀಮತಿ ಮಹದೇವಮ್ಮ

ಅಧ್ಯಕ್ಷರು

ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ

ಹಾಜರಿ: 07

ಗೈರು ಹಾಜರಿ:00

<table>
<tr><th>ಕ್ರಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td></td><td></td><td>ಯೋಜನಾ ನಿರ್ದೇಶಕರು(ಡಿ.ಆರ್.ಡಿ.ಎ) ಕೋಶ, ಇವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರನ್ನು ಕೋರಿದರು.</td><td></td></tr>
<tr><td>1</td><td>ಜುಲೈ 2010 ಮತ್ತು ಆಗಸ್ಟ್ 2010ರ ಮಾಹೆಗಳ ಮಾಸಿಕ ಲೆಕ್ಕಗಳನ್ನು ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸುವ ವಿಚಾರ.</td><td>ಟಿಪ್ಪಣಿ ಸಂಖ್ಯೆ: ಆರ್ಥಿಕ (ಸಂ) ಮಾಸಿಕ ಲೆಕ್ಕ–2/2010–11 ದಿನಾಂಕ: 23–10–2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಜಿಲ್ಲಾ ಪಂಚಾಯಿತಿ, ಹಾಸನದ ಜುಲೈ 2010 ಮತ್ತು ಆಗಸ್ಟ್ 2010 ಮಾಹೆಗಳ ಜಮಾ ಮತ್ತು ಖರ್ಚಿನ ತ:ಖ್ತೆಗಳು ಚಲನ್ ಮತ್ತು ಓಚರ್‌ಗಳು ಸ್ವೀಕೃತವಾಗಿರುತ್ತದೆ. ಖಜಾನೆಯಿಂದ ಸ್ವೀಕೃತವಾದ ಒಟ್ಟು ಜಮೆ ಮತ್ತು ಖರ್ಚಿನ ವಿವರಗಳನ್ನು ಪ್ರಧಾನ ಶೀರ್ಷಿಕೆವಾರು ಸಂಕಲನಗೊಳಿಸಿ ಗಣಕೀಕರಣಕ್ಕೆ ತಯಾರಿಸಲಾಗಿದೆ. ಸದರಿ ಸಂಕಲನದ ತ:ಖ್ತೆಯಲ್ಲಿ ರಾಜಸ್ವ ಜಮೆ ಮತ್ತು ಬಂಡವಾಳ ವೆಚ್ಚಗಳನ್ನು ಶೀರ್ಷಿಕೆಗಳವಾರು ಕ್ರೋಢೀಕರಿಸಲಾಗಿದೆ. ಜುಲೈ 2010 ಮತ್ತು ಆಗಸ್ಟ್ 2010ರ ಮಾಹೆಗಳ ಮಾಸಿಕ ಲೆಕ್ಕಗಳ ಜಿಲ್ಲಾ ಪಂಚಾಯಿತಿಯ ಒಟ್ಟು ಜಮಾ ಮತ್ತು ಖರ್ಚಿನ ವಿವರವು ಈ ಕೆಳಗಿನಂತಿದ್ದು, ಸದರಿ ವಿವರಗಳನ್ನು ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುತ್ತಾರೆ.<br><table><tr><th>ವಿವರ</th><th>ಜುಲೈ2010</th><th>ಆಗಸ್ಟ್ 2010</th></tr><tr><td>ಜಮೆ</td><td>12406636</td><td>272444886</td></tr><tr><td>ರ್ಚು</td><td>103829745</td><td>125853581</td></tr></table></td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಾಸನ ಜಿಲ್ಲಾ ಪಂಚಾಯಿತಿಯ ಜುಲೈ 2010 ಮತ್ತು ಆಗಸ್ಟ್ 2010ರ ಮಾಹೆಗಳ ಮಾಸಿಕ ಲೆಕ್ಕಗಳ ಜಿಲ್ಲಾ ಪಂಚಾಯಿತಿಯ ಒಟ್ಟು ಜಮಾ ಮತ್ತು ಖರ್ಚಿನ ವಿವರಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.<br><table><tr><th>ವಿವರ</th><th>ಜುಲೈ2010</th><th>ಆಗಸ್ಟ್ 2010</th></tr><tr><td>ಜಮೆ</td><td>12406636</td><td>272444886</td></tr><tr><td>ಖರ್ಚು</td><td>103829745</td><td>125853581</td></tr></table></td></tr>
<tr><td>2</td><td>ಜಿಲ್ಲಾ ಪಂಚಾಯಿತಿ ಹಾಸನಕ್ಕೆ 3ನೇ ತ್ರೈ ಮಾಸಿಕ ಅನುದಾನಗಳ ಜಮೆ ವಿವರಗಳ ಬಗ್ಗೆ.</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಆವ್ಯ: ಅಧೀ:1:4:ಹಕಾಸ್ಥಾ:ಟಿಪ್ಪಣಿ: 2010–11 ದಿನಾಂಕ: 23–10–2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಸರ್ಕಾರದ ಆದೇಶದನ್ವಯ ಜಿಲ್ಲಾ ಪಂಚಾಯಿತಿ ಹಾಸನಕ್ಕೆ ಆರ್ಥಿಕ ಇಲಾಖೆಯಿಂದ ಲಿಂಕ್ ಡಾಕ್ಯುಮೆಂಟ್ ಅನುದಾನ/ ಇಲಾಖೆ ಅನುದಾನ/ ಕೇಂದ್ರ ಪುರಸ್ಕೃತ ಅನುದಾನಗಳು/ ಗ್ರಾಮೀಣ ಕುಡಿಯುವ ನೀರಿನ</td><td>ಹಾಸನ ಜಿಲ್ಲಾ ಪಂಚಾಯಿತಿಗೆ ಸರ್ಕಾರದ ಆದೇಶದನ್ವಯ ಜಿಲ್ಲಾ ಪಂಚಾಯಿತಿಗೆ ಆರ್ಥಿಕ ಇಲಾಖೆಯಿಂದ ಲಿಂಕ್ ಡಾಕ್ಯುಮೆಂಟ್ ಅನುದಾನ/ ಇಲಾಖೆ ಅನುದಾನ/ ಕೇಂದ್ರ ಪುರಸ್ಕೃತ ಅನುದಾನ/ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಅನುದಾನಗಳ ಬಗ್ಗೆ ಸಭೆಯು ಅವಗಾಹಿಸಿತು.</td></tr>
</table>

| | | | |
|---|---|---|---|
| | | ಯೋಜನೆ ಅನುದಾನಗಳು ಬಿಡುಗಡೆಯಾಗಿರುವ ಬಗ್ಗೆ ಸಭೆಯ ಅವಗಾಹನೆಗೆ ಮಂಡಿಸಿದರು. | |
| 3 | ಹಾಸನ ಜಿಲ್ಲಾ ಯುವ ಒಕ್ಕಲಿಗ ಸಮಾಜ ಸೇವಾ ಟ್ರಸ್ಟ್(ರಿ) ಧನ ಸಹಾಯ ನೀಡುವ ಬಗ್ಗೆ | ಹಾಸನ ನಗರದಲ್ಲಿ ಹಾಸನ ಜಿಲ್ಲಾ ಯುವ ಒಕ್ಕಲಿಗ ಸಮಾಜ ಸೇವಾ ಟ್ರಸ್ಟ್ (ರಿ) ನ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಂಡಿದ್ದು, ಇದಕ್ಕೆ ಧನಸಹಾಯವನ್ನು ನೀಡಬೇಕೆಂದು ಹಾಸನ ಜಿಲ್ಲಾ ಯುವ ಒಕ್ಕಲಿಗ ಸಮಾಜ ಟ್ರಸ್ಟಿನವರು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಾಸನ ನಗರದಲ್ಲಿ ಸ್ಥಾಪಿಸಲಿರುವ ಹಾಸನ ಜಿಲ್ಲಾ ಯುವ ಒಕ್ಕಲಿಗ ಸಮಾಜ ಸೇವಾ ಟ್ರಸ್ಟ್ (ರಿ) ನ ಉದ್ಘಾಟನಾ ಸಮಾರಂಭಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 4 | ಜಿಲ್ಲಾ ಪಂಚಾಯಿತಿ ವತಿಯಿಂದ ಕ್ರೀಡಾ ಪ್ರೋತ್ಸಾಹಧನವನ್ನು ಕೊಡಿಸಿಕೊಡುವ ಬಗ್ಗೆ | ಹೆಚ್.ಪಿ. ಜೀವಿತ ಬಿನ್ ಹೆಚ್.ಎನ್.ಪ್ರಕಾಶ್, ಹೆಬ್ಬಳಲು, ಚನ್ನರಾಯಪಟ್ಟಣ ತಾ: ಇವರು ಚಾಮುಂಡೇಶ್ವರಿ ಕ್ರೀಡಾಂಗಣ, ಮೈಸೂರು ಇಲ್ಲಿ ವಾಲೀಬಾಲ್ ಕ್ರೀಡಾಭ್ಯಾಸ ನಡೆಸುತ್ತಿದ್ದು, ಇವರು ವಾಲೀಬಾಲ್ ಆಟದಲ್ಲಿ ಜಿಲ್ಲಾ ರಾಜ್ಯ ಮತ್ತು ರಾಷ್ಟ್ರ ಮಟ್ಟವನ್ನು ಸಹ ಪ್ರತಿನಿಧಿಸಿ ಜಿಲ್ಲೆಗೆ ಹೆಸರು ತಂದಿದ್ದು, ಇವರಿಗೆ ಜಿಲ್ಲಾ ಪಂಚಾಯಿತಿ ವತಿಯಿಂದ ಧನಸಹಾಯವನ್ನು ನೀಡಬೇಕೆಂದು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ವಾಲೀಬಾಲ್ ಕ್ರೀಡಾಪಟುವಾದ ಹೆಚ್.ಪಿ.ಜೀವಿತ ಬಿನ್ ಹೆಚ್.ಎನ್.ಪ್ರಕಾಶ್ ಹೆಬ್ಬಳಲು, ಚನ್ನರಾಯ ಪಟ್ಟಣ ತಾ: ಇವರಿಗೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/- (ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತ ದಿಂದ ತೀರ್ಮಾನಿಸಿತು. |
| 5 | 2010-11ನೇ ಸಾಲಿನಲ್ಲಿ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದ ಸ್ಪರ್ಧೆಗಳನ್ನು ನಡೆಸಲು ಆರ್ಥಿಕ ಸಹಾಯಧನ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8) ವಂತಿಕೆ -118/2010-11 ದಿನಾಂಕ: 18-10-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2010-11ನೇ ಸಾಲಿನಲ್ಲಿ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು ಜಿಲ್ಲಾ ಸರ್ಕಾರಿ ನೌಕರರ ಸಂಘ, ಹಾಸನ ಹಾಗೂ ಜಿಲ್ಲಾ ಯುವಜನ ಸೇವೆ ಮತ್ತು ಕ್ರೀಡಾ ಇಲಾಖಾ ವತಿಯಿಂದ ಅಕ್ಟೋಬರ್ ಮಾಹೆಯ 2ನೇ ವಾರದಲ್ಲಿ ನಡೆಸಲು ತೀರ್ಮಾನಿಸಲಾಗಿದ್ದು, ಈ ಕ್ರೀಡಾಕೂಟಕ್ಕೆ ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕಿನಿಂದ ಸುಮಾರು 1500 ಕ್ರೀಡಾಪಟುಗಳು ಆಗಮಿಸಲಿದ್ದು, ಈ ಕ್ರೀಡಾಕೂಟ ನಡೆಸಲು ರೂ.1,25,000/-ಗಳು ವೆಚ್ಚವಾಗಲಿದ್ದು, ಸದರಿ ಕ್ರೀಡಾಕೂಟಕ್ಕೆ ಈ ವರ್ಷವೂ ಸಹ ರೂ.25,000/- ಗಳ ಧನಸಹಾಯವನ್ನು ಜಿಲ್ಲಾ ಪಂಚಾಯಿತಿ ವತಿಯಿಂದ ನೀಡುವಂತ ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ, ಹಾಸನ ಇವರು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ, ಹಾಸನ ಇವರು ಕೋರಿರುವಂತೆ, 2010-11ನೇ ಸಾಲಿನಲ್ಲಿ ನಡೆಯುವ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾ ಕೂಟಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 6 | 16ನೇ ಏಷಿಯನ್ ಕ್ರೀಡಾಕೂಟ ದಲ್ಲಿ ಭಾಗವಹಿಸಲು ಧನಸಹಾಯ ಕೋರಿ | ಶ್ರೀ ಎಸ್.ಆರ್.ಕಾಳೇಗೌಡ, ಶ್ರೀಮತಿ ಗಂಗಮ್ಮ, ಶ್ರೀ ಪಿ.ಪುರಷೋತ್ತಮ, ಶ್ರೀ ಜಿ.ರಂಗಸ್ವಾಮಿ, ಶ್ರೀ ಧರಣೀಶ ಇವರು ಮಲೇಶಿಯಾದ ಕೋಲಲಾಂಪುರದಲ್ಲಿ ದಿನಾಂಕ: 06-12-2010ರಿಂದ 12-12-2010ರವರೆಗೆ ನಡೆಯುವ 16ನೇ ಏಷಿಯನ್ ಹಿರಿಯರ ಅಥ್ಲೇಟಿಕ್ಸ್ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಭಾಗವಹಿಸಲು ಭಾರತ ತಂಡದಿಂದ ಆಯ್ಕೆಯಾಗಿದ್ದು, ಅಲ್ಲಿಗೆ ಹೋಗಿ ಬರಲು ಪ್ರವೇಶ ಶುಲ್ಕ, ವಿಮಾನ ಪ್ರಯಾಣ, ಊಟ ವಸತಿ ವ್ಯವಸ್ಥೆ, ವೀಸಾ ಇತ್ಯಾದಿ ವೆಚ್ಚಕ್ಕಾಗಿ ರೂ.65000/- ರಿಂದ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಶ್ರೀ ಎಸ್.ಆರ್.ಕಾಳೇಗೌಡ, ಶ್ರೀಮತಿ ಗಂಗಮ್ಮ, ಶ್ರೀ ಪಿ.ಪುರಷೋತ್ತಮ, ಶ್ರೀ ಜಿ.ರಂಗಸ್ವಾಮಿ, ಶ್ರೀ ಧರಣೀಶ ಇವರುಗಳಿಗೆ ದಿನಾಂಕ: 06-12-2010ರಿಂದ 12-12-2010ರವರೆಗೆ ಮಲೇಶಿಯಾದ ಕೋಲಲಾಂಪುರದಲ್ಲಿ ನಡೆಯುವ ಏಷಿಯನ್ ಹಿರಿಯರ ಅಥ್ಲೇಟಿಕ್ಸ್‌ನಲ್ಲಿ |

| | | | |
|---|---|---|---|
| | | ರೂ.75000/-ರವರೆಗೆ ಖರ್ಚಾಗಲಿದ್ದು, ಜಿಲ್ಲಾ ಪಂಚಾಯಿತಿ ವತಿಯಿಂದ ಧನ ಸಹಾಯ ನೀಡಬೇಕೆಂದು ಕೋರಿರುತ್ತಾರೆ. | ಭಾಗವಹಿಸಲು ಅನುಕೂಲ ವಾಗುವಂತೆ ಜಿಲ್ಲಾ ಪಂಚಾಯಿತಿಯಿಂದ ತಲಾ ರೂ.5000/-ಗಳಂತೆ ಒಟ್ಟು ರೂ.25000/-(ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 7 | ಶಸ್ತ್ರ ಚಿಕಿತ್ಸೆಗೆ ಜಿಲ್ಲಾ ಪಂಚಾಯಿತಿಯಿಂದ ಧನಸಹಾಯ ನೀಡುವ ಬಗ್ಗೆ | ಮಾನ್ಯ ಉಪಾಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರು ಮನವಿಯನ್ನು ಸಲ್ಲಿಸಿ ಅದರಲ್ಲಿ ಲೂಯಿಸ್ ಡಿಸೋಜ, ಕಡೇನಹಳ್ಳಿ ಗ್ರಾಮ, ಅನುಘಟ್ಟ ಅಂಚೆ, ಬೇಲೂರು ತಾಲ್ಲೂಕು ಇವರು ಬಡ ಕುಟುಂಬ ವರ್ಗಕ್ಕೆ ಸೇರಿದ್ದು, ತಮ್ಮ 7 ವರ್ಷದ ಪ್ರೇಮ್ ಡಿಸೋಜ, ಅಂಗವಿಕಲತೆ ಹೊಂದಿದ್ದು, ಎಡಕಾಲಿನ ಶಸ್ತ್ರ ಚಿಕಿತ್ಸೆ ಮಾಡಿಸಲು ಕನಿಷ್ಠ ರೂ.40000.00ಗಳು ಖರ್ಚು ಆಗುವುದರಿಂದ, ಜಿಲ್ಲಾ ಪಂಚಾಯಿತಿ ವತಿಯಿಂದ ಧನಸಹಾಯ ಮಾಡಲು ಮನವಿ ಮಾಡಿದ್ದು, ಸದರಿಯವರ ಮಗನ ಶಸ್ತ್ರ ಚಿಕಿತ್ಸೆಗಾಗಿ ಜಿಲ್ಲಾ ಪಂಚಾಯಿತಿ ವತಿಯಿಂದ ಧನ ಸಹಾಯ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸಹಾಯ ಮಾಡುವಂತೆ ಕೋರಿರುತ್ತಾರೆ.<br>ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರು ಮಾತನಾಡುತ್ತಾ, ಇಂತಹ ಪ್ರಕರಣಗಳಿಗೆ ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಡಿಯಲ್ಲಿ ಎಲ್ಲಾ ನೆರವನ್ನು ನೀಡಲಾಗುವುದು ಎಂದು ಸಭೆಗೆ ವಿವರ ನೀಡಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಡಿ ಇಂತಹ ಪ್ರಕರಣಗಳಿಗೆ ಹೆಚ್ಚಿನ ಸೌಲಭ್ಯ ದೊರಕುವುದರಿಂದ, ಜಿಲ್ಲಾ ಪಂಚಾಯಿತಿ ವತಿಯಿಂದ ಧನಸಹಾಯ ನೀಡದಿರಲು ಸಭೆಯು ತೀರ್ಮಾನಿಸಿತು. |
| 8 | ಸರ್ಕಾರಿ ಅನುದಾನಿತ ಶಾಲೆಗಳಿಗೆ ಅವಶ್ಯ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆ ಯನ್ನು ಸಲ್ಲಿಸುವ ಬಗ್ಗೆ | ಅನುದಾನಿತ ಶಾಲೆಗಳ ಶಿಕ್ಷಕರುಗಳಿಗೆ ವೇತನಕ್ಕೆ ಅನುದಾನದ ಕೊರತೆಯಿದ್ದು, ವೇತನವಿಲ್ಲದೆ ಶಿಕ್ಷಕರುಗಳಿಗೆ ತುಂಬಾ ತೊಂದರೆಯಾಗಿರುತ್ತದೆ. ಆದ್ದರಿಂದ, ಅವಶ್ಯ ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಸಮಿತಿ ಸದಸ್ಯರು ಕೋರಿದರು. | ಸಭೆಯಲ್ಲಿ ಚರ್ಚಿಸಿದಂತೆ, ಅನುದಾನಿತ ಶಾಲೆಗಳಿಗೆ ಸರ್ಕಾರದಿಂದ, ನಿಗದಿಪಡಿಸಿರುವ ಅನುದಾನ ತುಂಬಾ ಕಡಿಮೆಯಿದ್ದು, ಶಿಕ್ಷಕರುಗಳಿಗೆ ವೇತನವಿಲ್ಲದೆ ತುಂಬಾ ತೊಂದರೆಯಾಗಿರುವುದರಿಂದ, ಅವಶ್ಯ ಅನುದಾನ ವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತ ದಿಂದ ತೀರ್ಮಾನಿಸಿತು. |
| 9 | ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ರುವ ಶಿಕ್ಷಕರುಗಳಿಗೆ ವೇತನ ಪಾವತಿಸುವ ಬಗ್ಗೆ. | ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಶಿಕ್ಷಕರುಗಳಿಗೆ ವೇತನ ನೀಡದೆ ತುಂಬಾ ತೊಂದರೆಯಾಗಿರುತ್ತದೆ. ಬೇರೆ ಜಿಲ್ಲೆಗಳಲ್ಲಿ ಹಿಂದೆ ನೇಮಕ ಮಾಡಿಕೊಂಡಿರುವ ಶಿಕ್ಷಕರುಗಳನ್ನೇ ಮುಂದುವರೆಸಿ ಅವರಿಗೆ ವೇತನ ನೀಡಿರುತ್ತಾರೆ. ಆದ್ದರಿಂದ, ಹಾಸನ ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ನೇಮಕಗೊಂಡಿರುವ ಶಿಕ್ಷಕರುಗಳಿಗೆ ವೇತನ ಪಾವತಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ಅಭಿಪ್ರಾಯಪಟ್ಟರು. | ಸಭೆಯಲ್ಲಿ ಚರ್ಚಿಸಿದಂತೆ, ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಕೊಂಡಿರುವ ಶಿಕ್ಷಕರುಗಳಿಗೆ ವೇತನ ಪಾವತಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆ ಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು | | |
|---|---|---|---|
| 1 | ಮಹಿಳಾ ಸಮ್ಮೇಳನಕ್ಕೆ ಧನ ಸಹಾಯ ನೀಡುವ ಬಗ್ಗೆ. | ಮಾನ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಮಾತನಾಡುತ್ತಾ, ಶ್ರೀ ಹೇಮಾವತಿ ಮಹಿಳಾ ಸಮಾಜ (ರಿ) ನುಗ್ಗೇಹಳ್ಳಿ ಇವರ ವತಿಯಿಂದ ನವೆಂಬರ್ 2010ರ ಮಾಹೆಯಲ್ಲಿ ಮಹಿಳಾ ಸಮಾಜದ ವತಿಯಿಂದ ಸಂಘದ ಸದಸ್ಯರುಗಳ ಸಮಾವೇಶವನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ಸದರಿ ಸಮಾವೇಶಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ಧನ ಸಹಾಯ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರು ಕೋರಿರುವಂತೆ ಶ್ರೀ ಹೇಮಾವತಿ ಮಹಿಳಾ ಸಮಾಜ (ರಿ) ನುಗ್ಗೇಹಳ್ಳಿ, ನವೆಂಬರ್ 2010ರ ಮಾಹೆಯಲ್ಲಿ ಇವರ ವತಿಯಿಂದ ನುಗ್ಗೇಹಳ್ಳಿಯಲ್ಲಿ ಹಮ್ಮಿಕೊಳ್ಳಲಿರುವ ಮಹಿಳಾ ಸಮಾವೇಶಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನ ಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 2 | ಪೂನಾದಲ್ಲಿ ನಡೆಯುವ ಖೋ-ಖೋ ಪಂದ್ಯಾವಳಿ ಯಲ್ಲಿ ಭಾಗವಹಿಸಲು ಧನಸಹಾಯ ನೀಡುವ ಬಗ್ಗೆ. | ಕಾರ್ಯದರ್ಶಿ, ಹಾಸನಾಂಬ ಖೋ-ಖೋ ಕ್ಲಬ್ (ರಿ), ಹಾಸನ ಇವರು ಮನವಿಯನ್ನು ಸಲ್ಲಿಸಿ, ಪೂನ ನವ ಮಹಾರಾಷ್ಟ್ರ ಖೋ-ಖೋ ಸಂಸ್ಥೆಯವರು ನವೆಂಬರ್-9ರಿಂದ 14ರವರೆಗೆ ನಡೆಸುತ್ತಿರುವ ಅಖಿಲ ಭಾರತ ಖೋ-ಖೋ ಆಹ್ವಾನಿತ ಕ್ರೀಡಾಕೂಟಕ್ಕೆ ಕರ್ನಾಟಕದಿಂದ ಹಾಸನಾಂಬ ಖೋ-ಖೋ ಕ್ಲಬ್ ತಂಡವನ್ನು ಆಯ್ಕೆ ಮಾಡಿದ್ದು, ತಂಡವು ಪೂನಾದ ಕ್ರೀಡಾಕೂಟದಲ್ಲಿ ಭಾಗವಹಿಸಲು ಜಿಲ್ಲಾ ಪಂಚಾಯಿತಿ ವತಿಯಿಂದ ಧನಸಹಾಯ ನೀಡುವಂತೆ ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಕಾರ್ಯದರ್ಶಿ, ಹಾಸನಾಂಬ ಖೋ-ಖೋ ಕ್ಲಬ್ (ರಿ), ಹಾಸನ ಇವರು ಕೋರಿರುವಂತೆ ಪೂನಾದಲ್ಲಿ ನಡೆಯುವ ಖೋ-ಖೋ ಕ್ರೀಡಾಕೂಟದಲ್ಲಿ ಭಾಗವಹಿಸಲು ಅನುಕೂಲ ವಾಗುವಂತೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 3 | ಹಾಸನನಗರದಲ್ಲಿ ನಡೆಯುತ್ತಿರುವ ಆರೋಗ್ಯ ಮತ್ತು ಆಧ್ಯಾತ್ಮಿಕ ಪ್ರವಚನ ಕಾರ್ಯ ಕ್ರಮಕ್ಕೆ ಧನ ಸಹಾಯ ನೀಡುವ ಕುರಿತು. | ಕಾರ್ಯದರ್ಶಿ, ಪ್ರವಚನ ಸೇವಾ ಸಮಿತಿ, ಹಾಸನ, ಬಸವ ಮಹಾಮನೆ, ಶಿವಪುರ, ಬೇಲೂರು ತಾ: ಇವರು ಮನವಿಯನ್ನು ಸಲ್ಲಿಸಿ ಹಾಸನ ನಗರದಲ್ಲಿ ಶ್ರೀ ಶ್ರೀ ಬಸವಾನಂದ ಸ್ವಾಮೀಜಿಗಳು ರೋಗದಿಂದ ಯೋಗದೆಡೆಗೆ ಎಂಬ ಆರೋಗ್ಯ ಮತ್ತು ಆದ್ಯಾತ್ಮಿಕ ಪ್ರವಚನ ಮತ್ತು ಯೋಗಾಸನ ಪ್ರಾಣಾಯಾಮ, ದ್ಯಾನ ಶಿಬಿರ ಎಂಬ ಕಾರ್ಯವನ್ನು ಉಚಿತವಾಗಿ ಸತತ 30 ದಿನಗಳ ಕಾಲ ನಡೆಸುತ್ತಿದ್ದು, ಈ ಕಾರ್ಯಕ್ರಮಕ್ಕೆ ಬಹಳಷ್ಟು ಹಣದ ಅಗತ್ಯತೆ ಇರುತ್ತದೆ. ಆದ್ದರಿಂದ, ತಾವು ಈ ಕಾರ್ಯಕ್ರಮಕ್ಕೆ ಸಹಾಯಧನವನ್ನು ಕೊಡಿಸಿಕೊಡಬೇಕಾಗಿ ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಕಾರ್ಯದರ್ಶಿ, ಪ್ರವಚನ ಸೇವಾ ಸಮಿತಿ, ಹಾಸನ, ಬಸವ ಮಹಾಮನೆ, ಶಿವಪುರ, ಬೇಲೂರು ತಾ: ಇವರು ಕೋರಿರುವಂತೆ ಹಾಸನ ನಗರದಲ್ಲಿ ಶ್ರೀ ಶ್ರೀ ಬಸವಾನಂದ ಸ್ವಾಮೀಜಿಗಳು ನಡೆಸುತ್ತಿರುವ ರೋಗದಿಂದ ಯೋಗದೆಡೆಗೆ ಎಂಬ ಆರೋಗ್ಯ ಮತ್ತು ಆದ್ಯಾತ್ಮಿಕ ಪ್ರವಚನ ಮತ್ತು ಯೋಗಾಸನ ಪ್ರಾಣಾಯಾಮ, ದ್ಯಾನ ಶಿಬಿರ ಎಂಬ ಕಾರ್ಯಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 4 | ಡಿಸೆಂಬರ್ 2010 ರ ಮಾಹೆ ಯಲ್ಲಿ ಜರ್ಮನಿಯಲ್ಲಿ ನಡೆಯುವ ವಾಲಿಬಾಲ್ ಕ್ರೀಡಾ ಕೂಟದಲ್ಲಿ ಭಾಗವಹಿ ಸಲು ಧನ ಸಹಾಯ ನೀಡು ವಂತೆ ಕೋರಿ. | ಮಾನ್ಯ ಸದಸ್ಯರಾದ ಶ್ರೀ ಸಿ.ಎಸ್.ಪ್ರಕಾಶ್‌ರವರು ಮನವಿಯನ್ನು ಸಲ್ಲಿಸಿ ಔರಂಗ್ ಅರಬಾಜ್, ಬೆಳ್ಳೋಟ್ಟೆ, ತೊಳಲು ಅಂಚೆ, ಅರೇಹಳ್ಳಿ ಹೋಬಳಿ, ಬೇಲೂರು ತಲ್ಲೂಕು ಇವರು ಅಂಗವಿಕಲರಾಗಿದ್ದು, ಡಿಪ್ಲೋಮಾ ವ್ಯಾಸಂಗ ಮಾಡುತ್ತಿದ್ದು, ವಾಲಿಬಾಲ್ ಕ್ರೀಡಾಪಟುವಾಗಿರುತ್ತಾರೆ ಹಾಗೂ ಚಂಡೀಗಡದಲ್ಲಿ ನಡೆದ 5ನೇ ರಾಷ್ಟ್ರೀಯ ಸಿಟ್ಟಿಂಗ್ ಮತ್ತು ಸ್ಟ್ಯಾಂಡಿಗ್ ವಾಲಿಬಾಲ್ ಕ್ರೀಡೆಯಲ್ಲಿ ಕರ್ನಾಟಕ ರಾಜ್ಯ ತಂಡದಲ್ಲಿ ಚಾಂಪಿಯನ್ ಟೋಪಿ ಗೆದ್ದುಕೊಂಡಿರುತ್ತದೆ. ಈಗ ಜರ್ಮನಿಯಲ್ಲಿ ಡಿಸೆಂಬರ್ 2010 ರಲ್ಲಿ ನಡೆಯುವ ವಾಲಿಬಾಲ್ ಕ್ರೀಡೆಯಲ್ಲಿ ಭಾಗವಹಿಸುತ್ತಿದ್ದು, ಸದರಿಯವರು ಆರ್ಥಿಕವಾಗಿ ಸಬಲರಲ್ಲದ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಔರಂಗ್ ಅರಬಾಜ್, ಬೆಳ್ಳೋಟ್ಟೆ, ತೊಳಲು ಅಂಚೆ, ಅರೇಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು ಇವರು ಜರ್ಮನಿಯಲ್ಲಿ ಡಿಸೆಂಬರ್ 2010 ರಲ್ಲಿ ನಡೆಯುವ ವಾಲಿಬಾಲ್ ಕ್ರೀಡೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಸಹಾಯಧನವನ್ನು ನೀಡಲು ಸಭೆಯು |

| | | | |
|---|---|---|---|
| | | ಕಾರಣ ಇವರಿಗೆ ಗರಿಷ್ಠ ಮೊತ್ತದ ಸಹಾಯಧನವನ್ನು ಮಾಡಿಕೊಡಲು ಮನವಿ ಮಾಡಿದ್ದು, ಔರಂಗ್ ಅರಬಾಜ್, ಬೆಳ್ಳೋಟ್ಟೆ ಇವರಿಗೆ ಸಹಾಯಧನವನ್ನು ಒದಗಿಸಿಕೊಡಬೇಕೆಂದು ಕೋರಿರುತ್ತಾರೆ. | ಸರ್ವಾನುಮತದಿಂದ ತೀರ್ಮಾನಿಸಿತು. |
| 5 | 2010-11ನೇ ಸಾಲಿನ ರಾಜ್ಯ ಮಟ್ಟದ ಟೇಬಲ್ ಟೆನ್ನಿಸ್ ಪಂದ್ಯಾವಳಿ ಯನ್ನು ಹಾಸನ ಜಿಲ್ಲೆ ಯಲ್ಲಿ ಆಯೋಜಿಸುತ್ತಿದ್ದು, ಧನ ಸಹಾಯ ನೀಡುವ ಬಗ್ಗೆ. | ಉಪ ನಿರ್ದೇಶಕರು, ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ, ಹಾಸನ ಇವರು ಮನವಿಯನ್ನು ಸಲ್ಲಿಸಿ 2010-11ನೇ ಸಾಲಿನ ಪದವಿ ಪೂವ್ ಹಾಗೂ ವೃತ್ತಿ ಶಿಕ್ಷಣ ಕಾಲೇಜುಗಳ ರಾಜ್ಯ ಮಟ್ಟದ ಟೇಬಲ್ ಟೆನ್ನೀಸ್ ಪಂದ್ಯಾವಳಿಯನ್ನು ಹಾಸನ ಜಿಲ್ಲೆಯಲ್ಲಿ ನಡೆಸಲು ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರು ತಿಳಿಸಿದ್ದು, ದಿನಾಂಕ: 19-11-2010 ಮತ್ತು 20-11-2010 ಈ ದಿನಗಳಂದು ಜಿಲ್ಲಾ ಕ್ರೀಡಾಂಗಣದ ಮುಂಬಾಗದಲ್ಲಿರುವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಈ ಪಂದ್ಯಾವಳಿಯಲ್ಲಿ ಬಾಲಕ ಬಾಲಕಿಯರು ಸುಮಾರು 50 ರಿಂದ 60 ತಂಡಗಳು ಭಾಗವಹಿಸುತ್ತಿದ್ದು, ಜಿಲ್ಲಾ ಪಂಚಾಯಿತಿಯಿಂದ ಆರ್ಥಿಕ ಸಹಕಾರವನ್ನು ನೀಡಬೇಕೆಂದು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ, ಹಾಸನ ಇವರು ಕೋರಿರುವಂತೆ ಹಾಸನ ಜಿಲ್ಲೆಯಲ್ಲಿ ದಿನಾಂಕ: 19-11-2010 ಮತ್ತು 20-11-2010ರಂದು ನಡೆಯುವ ಟೇಬಲ್ ಟೆನ್ನಿಸ್ ಪಂದ್ಯಾವಳಿಗೆ ಜಿಲ್ಲಾ ಪಂಚಾಯಿತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 6 | ಜಿಲ್ಲಾ ಪಂಚಾಯಿತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪ್ರೋತ್ಸಾಹ ಧನ ಕೊಡಿಸಿಕೊಡುವ ಕುರಿತು. | ಶ್ರೀ ಶೇಖರಪ್ಪ, ಜಾನಪದ ಕಲಾವಿದರು, ಹಾಸನ ಇವರು ಮನವಿಯನ್ನು ಸಲ್ಲಿಸಿ, ಇವರು ಪರಿಶಿಷ್ಠ ಪಂಗಡಕ್ಕೆ ಸೇರಿದ್ದು, ಜಾನಪದ ಸಂಗೀತದಲ್ಲಿ ರಾಜ್ಯ/ ರಾಷ್ಟ್ರ ಮಟ್ಟವನ್ನು ಪ್ರತಿನಿಧಿಸಿರುವುದರಿಂದ, ಜಿಲ್ಲಾ ಪಂಚಾಯಿತಿ ವತಿಯಿಂದ ಧನಸಹಾಯವನ್ನು ನೀಡಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರು ರೂ.10000/-ಗಳ ಧನಸಹಾಯವನ್ನು ನೀಡಲು ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರು ತಿಳಿಸಿರುವಂತೆ, ಶ್ರೀ ಶೇಖರಪ್ಪ, ಜಾನಪದ ಕಲಾವಿದರು, ಹಾಸನ ಇವರಿಗೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10000/-(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನ ಸಹಾಯವನ್ನು ನೀಡಲು ಸಭೆಯು ಸವಾನುಮತದಿಂದ ತೀರ್ಮಾನಿಸಿತು. |
| | | ಮಾನ್ಯ . ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಅನುಷ್ಠಾನ ಮಾಡಿರುವ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಎಫ್.ಎಸ್.ಡಿ ಹಣವನ್ನು ನೀಡಿರುವುದಿಲ್ಲ. ಎಫ್.ಎಸ್.ಟಿ ಹಣವನ್ನು ನೀಡುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕೆಂದು ಕೋರಿದರು.<br>ಮಾನ್ಯ ಸದಸ್ಯರು ಕೋರಿರುವಂತೆ ಎಫ್.ಎಸ್.ಡಿ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ವರದಿ ನೀಡುವಂತೆ ತಿಳಿಸಲಾಯಿತು.<br>ಪ್ರಸಕ್ತ ಸಾಲಿಗೆ 5054 ರಸ್ತೆ ಮತ್ತು ಸೇತುವೆ ಯೋಜನೆಯಡಿ ನಿಗದಿಪಡಿಸಿರುವ ಅನುದಾನದಲ್ಲಿ ರೂ.8.00ಲಕ್ಷಗಳ ಮಿತಿಯೊಳಗೆ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಟೆಂಡರ್ ಕರೆಯಲು ಕ್ರಮ ವಹಿಸಬೇಕೆಂದು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ ಇವರಿಗೆ ತಿಳಿಸಲಾಯಿತು.<br>ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಸಕಲೇಶಪುರ ತಾಲ್ಲೂಕಿನಲ್ಲಿ ಹಾನುಬಾಳು ಗ್ರಾಮದಲ್ಲಿರುವ ಸರ್ಕಾರಿ ಶಾಲೆಯಲ್ಲಿ ಸುಮಾರು 220 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಅಡುಗೆಯನ್ನು ಸಿದ್ದಪಡಿಸಲು ಅಡುಗೆ ಕೋಣೆಯಿಲ್ಲದೇ ತುಂಬಾ ತೊಂದರೆಯಾಗಿರುತ್ತದೆ. ಆದ್ದರಿಂದ, ಅಡುಗೆ ಕೋಣೆಯನ್ನು ಮಂಜೂರು ಮಾಡಬೇಕೆಂದು ಕೋರಿದರು. | ಸಭೆಯಲ್ಲಿ ಚರ್ಚಿಸಿದಂತೆ, ಕೃಷಿ ಇಲಾಖೆಯ ವತಿಯಿಂದ ವಿತರಣೆ ಮಾಡುವ ಬಿತ್ತನೆ ಬೀಜಗಳಿಗೆ ಶೇ.75 ಅಥವಾ ಶೇ.50ರಷ್ಟು ರಿಯಾಯಿತಿಯನ್ನು ನೀಡಬೇಕೆಂದು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | | |
|---|---|---|---|
| | | ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ರವರು ಉತ್ತರಿಸುತ್ತಾ, ಹಾನುಬಾಳು ಶಾಲೆಗೆ 2005-06ನೇ ಸಾಲಿನಲ್ಲಿ ಅಡುಗೆ ಮನೆ ಮಂಜೂರಾಗಿದ್ದು, ನಿರ್ಮಿತಿ ಕೇಂದ್ರದ ವತಿಯಿಮದ ಅಡುಗೆ ಮನೆಯನ್ನು ನಿರ್ಮಾಣ ಮಾಡಿರುವುದಿಲ್ಲ. ಸರ್ಕಾರದ ಆದೇಶದಲ್ಲಿ 2005-06ನೇ ಸಾಲಿನಲ್ಲಿ ಮಂಜೂರಾದ ಶಾಲೆಗಳನ್ನು ಹೊರತುಪಡಿಸಿ ಬೇರೆ ಶಾಲೆಗಳಿಗೆ ಅಡುಗೆ ಮನೆ ಮಂಜೂರು ಮಾಡುವಂತೆ ತಿಳಿಸಿರುವುದರಿಂದ ಹಾನುಬಾಳು ಶಾಲೆಗೆ ಅಡುಗೆ ಕೋಣೆಯನ್ನು ಮಂಜೂರು ಮಾಡಿರುವುದಿಲ್ಲವೆಂದು ವಿವರ ನೀಡಿದರು.<br>ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಅಡುಗೆ ಮನೆ ನಿರ್ಮಾಣಕ್ಕೆ ಸಂಬಂಧಿಸಿದಂತೆ, 2005-06ನೇ ಸಾಲಿನಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ಅಡುಗೆ ಮನೆಗಳನ್ನು ನಿರ್ಮಾಣ ಮಾಡಿದ್ದು, ಕೆಲವು ಅಡುಗೆ ಕೋಣೆ ಕಟ್ಟಡಗಳು ಪೂರ್ಣಗೊಂಡಿರುವುದಿಲ್ಲ. ಇದಕ್ಕೆ ಸಂಬಂದಿಸಿದಂತೆ, ಬಾಕಿ ಅನುದಾನವು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರ ಖಾತೆಯಲ್ಲಿರುತ್ತದೆ. ಆದ್ದರಿಂದ, ಅಡುಗೆ ಕೋಣೆ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಎಷ್ಟು ಹಣ ಬಾಕಿ ಉಳಿದಿದೆ ಎಂಬ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪೂರ್ಣ ವಿವರಗಳನ್ನು ಪಡೆದು ದಿನಾಂಕ: 03-11-2010ರಂದು ಸಭೆಯನ್ನು ನಡೆಸಿ ಶೇ.50ಕ್ಕಿಂತ ಹೆಚ್ಚು ಪೂರ್ಣಗೊಂಡಿರುವ ಅಡುಗೆ ಕೋಣೆ ಕಟ್ಟಡಗಳನ್ನು ಪೂರ್ಣಗೊಳಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರಿಂದ, ಅನುಮೋದನೆ ಪಡೆದು ಕ್ರಮ ವಹಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.<br>ಜಿಲ್ಲೆಯಲ್ಲಿ ವಿವಿಧ ರೀತಿಯ ಹವಾಮಾನವಿರುವುದರಿಂದ, ಹವಾಮಾನಕ್ಕೆ ಹೊಂದಿಕೆಯಾಗುವಂತಹ ಬೀಜಗಳನ್ನು ನೀಡಲು ಕೃಷಿ ಇಲಾಖೆಯ ವತಿಯಿಂದ ಕ್ರಮ ವಹಿಸಬೇಕೆಂದು ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಲಾಯಿತು.<br>ಮಾನ್ಯ ಉಪಾಧ್ಯಕ್ಷರು ಮಾತನಾಡುತ್ತಾ, ಬಿತ್ತನೆ ಬೀಜಗಳಿಗೆ ಸಂಬಂಧಿಸಿದಂತೆ, ಹಿಂದೆ ಶೇ.75 ಮತ್ತು ಶೇ.50ರಷ್ಟು ರಿಯಾಯಿತಿಯನ್ನು ಸರ್ಕಾರದಿಂದ ನೀಡಲಾಗುತ್ತಿತ್ತು. ಆದರೆ, ಈಗ ಕೆಲವು ಬಿತ್ತನೆ ಬೀಜಗಳಿಗೆ ಸರ್ಕಾರದಿಂದ ಶೇ.50ಕ್ಕಿಂತ ಕಡಿಮೆ ರಿಯಾಯಿತಿ ದೊರೆಯುತ್ತಿದ್ದು, ಇದರಿಂದ, ರೈತರಿಗೆ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ, ಶೇ.75ರಂತೆ ರಿಯಾಯಿತಿಯನ್ನು ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಕೋರಿದರು. | |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |



Mahadevamma.
(ಮಹದೇವಮ್ಮ)
ಅಧ್ಯಕ್ಷರು
ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ